

'ಅರ್ಕಾ ಪರಿಮಳ' ಸುಗಂಧಿತ ಗುಲಾಬಿ

# ಗುಲಾಬಿಗೆ ಹೊಸ ಘಮ-ಬಣ್ಣ



'ಅರ್ಕಾ ಸುಕನ್ಯ' ತಳಿಯ ಹೂವು

■ ಸಿ.ಎಸ್. ನಿರ್ವಾಣ ಸಿದ್ದಯ್ಯ

ಸುವಾಸನೆ ಬೀರುವ ಗುಲಾಬಿಯ ಹೊಸ ತಳಿಗಳನ್ನು ಬೆಂಗಳೂರಿನ ಹೆಸರಘಟ್ಟ ಗ್ರಾಮದಲ್ಲಿರುವ 'ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ'ಯ ತೇಜಸ್ವಿನಿ ಪ್ರಕಾಶ್ ಅಭಿವೃದ್ಧಿಪಡಿಸಿದ್ದಾರೆ.

ತೇಜಸ್ವಿನಿ ಅವರು ಸಂಸ್ಥೆಯಲ್ಲಿ ಹೂವಿನ ತಳಿಗಳ ಅಭಿವೃದ್ಧಿ ವಿಜ್ಞಾನಿ. ಅವರು ಅಭಿವೃದ್ಧಿಪಡಿಸಿರುವ 'ಅರ್ಕಾ ಪರಿಮಳ' ಮತ್ತು 'ಅರ್ಕಾ ಸುಕನ್ಯ' ಎನ್ನುವ ಹೊಸ ತಳಿಗಳು ರೈತರಿಗೆ ಹೆಚ್ಚಿನ ಆದಾಯ ತರಲಿವೆ ಎನ್ನಲಾಗಿದೆ. ಈ ತಳಿಗಳನ್ನು ಭಾರತೀಯ ತೋಟಗಾರಿಕೆ ಸಂಶೋಧನೆ ಸಂಸ್ಥೆಯ ಆವರಣದಲ್ಲಿ ಬೆಳೆಸಲಾಗಿದೆ.

## ಅರ್ಕಾ ಪರಿಮಳ

ಮನಸ್ಸಿಗೆ ಹಿತವೆನ್ನಿಸುವ ಗಾಢ ಸುವಾಸನೆ, ದಪ್ಪವಾದ ದಳಗಳು 'ಅರ್ಕಾ ಪರಿಮಳ' ತಳಿಯ ವಿಶೇಷಗಳು. ರಸ ಹೀರುವ ಕೀಟ ಮತ್ತು ಕಪ್ಪು ಚುಕ್ಕೆ ರೋಗಗಳನ್ನು ತಡೆದುಕೊಳ್ಳುವ ಸಹಿಷ್ಣುತೆಯನ್ನು ಹೊಂದಿರುವ ಇದು, ಉತ್ತಮ ರೋಗನಿರೋಧಕ ಶಕ್ತಿಯನ್ನು ಪಡೆದಿದೆ.

'ಅರ್ಕಾ ಪರಿಮಳ' ಗುಲಾಬಿಯನ್ನು ಆಹಾರ, ಬಣ್ಣ, ಸುಗಂಧದ್ರವ್ಯಗಳು, ಗುಲಾಬಿ ದಳದ ಚಹಾ ಮತ್ತು ಗುಲ್ಕನ್ ತಯಾರಿಕೆಯಲ್ಲಿ ಬಳಸಬಹುದಾಗಿದೆ. ಹೂವಿನ ಅಲಂಕಾರ ಮತ್ತು ಹೂದಾನಿಗಳಲ್ಲಿ ಈ ಗಿಡವನ್ನು ಇಟ್ಟರೆ ಹೆಚ್ಚು ಆಕರ್ಷಕವಾಗಿರುತ್ತದೆ. ಅಲಂಕಾರಕ್ಕಾಗಿ ಬಳಸುವ ಹೂವುಗಳು ಮೂರು ದಿನಗಳ ಕಾಲ ತಾಜಾ ಆಗಿ ಇರುತ್ತವೆ.

ತೆರೆದ ಕೃಷಿಗೆ ಹೊಂದಿಕೊಳ್ಳುವ ಈ ತಳಿಯು ಒಂದು ವರ್ಷಕ್ಕೆ ಒಂದು ಎಕರೆ ಪ್ರದೇಶದಲ್ಲಿ ಹತ್ತು ಲಕ್ಷ ಹೂವಿನ ಇಳುವರಿಯನ್ನು ನೀಡುತ್ತದೆ. ಒಂದು ಎಕರೆ ಪ್ರದೇಶಕ್ಕೆ ಎರಡು ಸಾವಿರ ಗಿಡಗಳನ್ನು ನಾಟಿ ಮಾಡಬಹುದು. ಜೂನ್–ಜುಲೈನಲ್ಲಿ ಈ ಗಿಡವನ್ನು ನಾಟಿ ಮಾಡುವುದು ಒಳಿತು.

## ಅರ್ಕಾ ಸುಕನ್ಯ

ಗಾತ್ರದಲ್ಲಿ ದಪ್ಪವಾಗಿರುವ ಈ ಹೂವು ಉದ್ಯಾನವನಗಳಿಗೆ ಹೊಸ ಶೋಭೆ ತರಬಲ್ಲದು. ಆಹ್ಲಾದಕರ ಘಮ ಹೊಂದಿರುವ ಈ ತಳಿಯ ಹೂಗಳು ಸುಗಂಧದ್ರವ್ಯ ಆಧಾರಿತ ಉತ್ಪನ್ನಗಳಲ್ಲಿ ಬಳಕೆಗೆ ಸೂಕ್ತ.

'ಅರ್ಕಾ ಸುಕನ್ಯ' ತಳಿಯಲ್ಲಿ, ಒಂದು ಎಕರೆ ಪ್ರದೇಶದಲ್ಲಿ ಒಂದು ವರ್ಷಕ್ಕೆ ಎರಡು ಸಾವಿರ ಗಿಡಗಳಿಂದ ಸುಮಾರು ಆರು ಲಕ್ಷ ಹೂವುಗಳ ಇಳುವರಿ ನಿರೀಕ್ಷಿಸಬಹುದು.

'ಪರಿಮಳಯುಕ್ತ ಅರ್ಕಾ ಸವಿ ಮತ್ತು ಸುಕನ್ಯಾ ತಳಿಯನ್ನು ಐದು ಎಕರೆ ಪ್ರದೇಶದಲ್ಲಿ ಬೆಳೆಯುತ್ತಿರುವೆ. ಈ ತಳಿಗಳ ಹೂಗಳನ್ನು ಅಲಂಕಾರಕ್ಕೆ ಬಳಕೆ ಮಾಡಬಹುದು. ಹೆಚ್ಚಿನ ಲಾಭಾಂಶ ಬರಬೇಕೆಂದರೆ ಸೌಂದರ್ಯವರ್ಧಕ ಸಾಧನವಾಗಿ ಬಳಸಬೇಕು. ನಾನು ಈ ತಳಿಯ ಹೂಗಳನ್ನು ರೋಸ್ ವಾಟರ್ ತಯಾರಿಕೆಗೆ ಬಳಸುತ್ತಿರುವೆ. ಅಮೆರಿಕಕ್ಕೆ ರಫ್ತು ಮಾಡುತ್ತಿರುವೆ. ರೋಸ್ ವಾಟರ್‌ಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದೆ' ಎನ್ನುತ್ತಾರೆ ರೋಸ್ ವಾಟರ್ ಉದ್ಯಮ ನಡೆಸುತ್ತಿರುವ ಬೆಂಗಳೂರಿನ ಮಂಜುನಾಥ್.

ರೋಸ್ ವಾಟರ್ ಯಂತ್ರವನ್ನು ಸ್ಥಾಪಿಸಲು ಸುಮಾರು ಒಂದೂವರೆ ಕೋಟಿ ರೂಪಾಯಿ ಬಂಡವಾಳ ಹೂಡಬೇಕಾಗುತ್ತದೆ. ಹಾಗಾಗಿ ತಾಲ್ಲೂಕು ಇಲ್ಲವೇ ಜಿಲ್ಲಾ ಕೇಂದ್ರದಲ್ಲಿ ಈ ಯಂತ್ರದ ಘಟಕವನ್ನು ಸರ್ಕಾರವೇ ಸ್ಥಾಪಿಸಿ, ರೈತರು ಬೆಳೆದ ಹೂಗಳನ್ನು ಖರೀದಿ ಮಾಡಿ, ರೋಸ್ ವಾಟರ್ ತಯಾರಿಸಿದರೆ ರೈತರು ಹೆಚ್ಚಿನ ಲಾಭ ಕಾಣಬಹುದಾಗಿದೆ.

'ಗುಲಾಬಿ ವಿಶ್ವದ್ಯಾಂತ ಬೇಡಿಕೆಯನ್ನು ಹೊಂದಿರುವ ಹೂ. ರೈತರು ಹೊಸ ತಳಿಯ ಹೂವುಗಳನ್ನು ಬೆಳೆಯುವ ಮೂಲಕ ತಮ್ಮ ಉತ್ಪನ್ನಕ್ಕೆ ಜಾಗತಿಕ ಮಾರುಕಟ್ಟೆ ಕಂಡುಕೊಳ್ಳಲು ಅವಕಾಶವಿದೆ. ಇದರಿಂದ ಅವರ ಆರ್ಥಿಕ ಮಟ್ಟ ಹೆಚ್ಚುತ್ತದೆ. ಹೆಚ್ಚಿನ ಲಾಭವನ್ನು ಗಳಿಸಬಹುದು' ಎನ್ನುತ್ತಾರೆ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಎಂ.ಆರ್. ದಿನೇಶ್.

ಮಾಹಿತಿಗಾಗಿ, ಮತ್ತು ಸಸಿಗಳಾಗಿ ಸಂಪರ್ಕ ಸಂಖ್ಯೆ: 08023086100/230/252/260

ಪ್ರತಿಕ್ರಿಯಿಸಿ: feedback@sudha.co.in



ಎಂ.ಆರ್. ದಿನೇಶ್



ತೇಜಸ್ವಿನಿ ಪ್ರಕಾಶ್